ತಿಳಿಯಿತು; ಈ ಸಲಹೆಯನ್ನು ಸ್ವೀಕರಿಸಲಿಲ್ಲ. 1909ರಲ್ಲಿ ಮೆಕಾಚಿನ್ ನಿವೃತ್ತನಾದಾಗ, ಆ ಹುದ್ದೆಯನ್ನು ವಿಶ್ವೇಶ್ವರಯ್ಯನವರು ವಹಿಸಿಕೊಂಡರು. ಮಹಾರಾಜರ ಕೋರಿಕೆಯ ಮೇರೆಗೆ ಈ ಯೋಜನೆಯ ಜವಾಬ್ದಾರಿಯನ್ನು ಹೊತ್ತುಕೊಂಡರು. ಬಹುಶಃ ವಿಶ್ವೇಶ್ವರಯ್ಯ ಮತ್ತು ಕನ್ನಂಬಾಡಿಯ ನಂಟು ಇಲ್ಲಿಂದಲೇ ಶುರುವಾಗುತ್ತದೆ. ವಿಶ್ವೇಶ್ವರಯ್ಯನವರ ಗುರಿ ಬರೀ ವಿದ್ಯುತ್ ಪೂರೈಕೆಯಾಗಿರಲಿಲ್ಲ; ಬದಲು ಕೃಷಿಗೆ ಹೇಗೆ ಈ ಯೋಜನೆ ನೆರವಿಗೆ ಬರುತ್ತದೆ ಎಂಬುದಾಗಿತ್ತು. ಈ ವಿವರಗಳನ್ನು, ತಮ್ಮ 'ವೃತ್ತಿ ಜೀವನದ ನೆನಪುಗಳು' ಎಂಬುದರಲ್ಲಿ ಯಾವುದೇ ಸ್ವಮೋಹವಿಲ್ಲದೆ ದಾಖಲಿಸಿದ್ದಾರೆ.

'124 ಅಡಿ ಎತ್ತರದ, 48 ಸಾವಿರ ದಶಲಕ್ಷ ಘನಅಡಿ (48 ಟಿ.ಎಂ.ಸಿ.) ನೀರನ್ನು ಸಂಗ್ರಹಿಸಬಲ್ಲ ಗಾರೆ ಅಣೆಕಟ್ಟಿನ ವಿನ್ಯಾಸವನ್ನು ಸಿದ್ಧಪಡಿಸಲಾಯಿತು. ಇದೇ ನೀರನ್ನು ಬಳಸಿ 80,000 ಎಚ್.ಪಿ. ವಿದ್ಯುತ್ ಉತ್ಪಾದನೆಗೆ ಬಳಸಬಹುದು ಎಂಬ ಲೆಕ್ಕವೂ ಸಿಕ್ಕಿತು. ಜಲಾಶಯವನ್ನು ನಿರ್ಮಿಸಲು ಗಾರೆ ಅಣೆಕಟ್ಟಿನ ಉದ್ದ 8.600 ಅಡಿ, ನದಿಯ ಮಟ್ಟದಿಂದ 130 ಅಡಿ ಎತ್ತರ. ಜಲಾಶಯದ ಒಟ್ಟು ಜಲಾನಯನ ಪ್ರದೇಶ 4,100 ಚ.ಮೈಲಿ. ವಾರ್ಷಿಕ ಸರಾಸರಿ ಹರಿವು 2,20,000 ದಶಲಕ್ಷ ಘನ ಅಡಿ ಎಂದು ಗುರುತಿಸಲಾಯಿತು'. ಇದು ಸರ್. ಎಂ. ವಿಶ್ವೇಶ್ವರಯ್ಯನವರ ಯೋಜನೆ. ಇದರ ಪ್ರಾಮುಖ್ಯದ ಬಗ್ಗೆ ಮಹಾರಾಜರಿಗೆ ಮನವರಿಕೆಯಾಯಿತು. ಯೋಜಕರೊಂದಿಗೆ ಚರ್ಚಿಸಿದರು, ಒಪ್ಪಿಗೆ ನೀಡಿದರು. ಆದರೆ ಅಡ್ಡ ಬಂದದ್ದು ಆರ್ಥಿಕ ಸಮಾಲೋಚನೆಯ ಸಮಿತಿ. ವಿಶ್ವೇಶ್ವರಯ್ಯನವರ ಯೋಜನೆಯಂತೆ ಇದಕ್ಕೆ ತಗಲುತ್ತಿದ್ದ ವೆಚ್ಚ, 253 ಲಕ್ಷ ರೂಪಾಯಿ (2.53 ಕೋಟಿ). ಇಡೀ ರಾಜ್ಯದ ಆಗಿನ ಆರ್ಥಿಕ ಉತ್ಪನ್ನವೇ ಇಷ್ಟು ಇಲ್ಲದಿರುವಾಗ, ಈ ಯೋಜನೆಯನ್ನು ಒಪ್ಪಿಕೊಳ್ಳುವುದು ಹೇಗೆ ಎಂಬ ಅಭಿಪ್ರಾಯ ಸಮಿತಿಯದು. ಮತ್ತೆ ಮಹಾರಾಜರು ಮುಕ್ತ ಚರ್ಚೆಮಾಡಿ, ಈ ಯೋಜನೆಯ ಮಂಜೂರಾತಿಯನ್ನು ಪೂರ್ಣಗೊಳಿಸಲಿಲ್ಲ. ಇದು ವಿಶ್ವೇಶ್ವರಯ್ಯನವರಿಗೆ ಅಸಮಾಧಾನ ತಂದದ್ದು ನಿಜ. ಮತ್ತೆ ಮಹಾರಾಜರು ಕರೆಸಿಕೊಂಡರು, ಅವರೊಂದಿಗೆ ವೈಯಕ್ತಿಕವಾಗಿ ಚರ್ಚಿಸಿ ಅಣೆಕಟ್ಟು ಕಟ್ಟಲು ಹಸಿರು ನಿಶಾನೆ ತೋರಿಸಿದರು. ಮುಂದೆ ಕರ್ನಾಟಕದ ನೀರಾವರಿ ಯೋಜನೆಗಳ ಮುಖವನ್ನೇ ಇದು ಬದಲಾಯಿಸಿತು. ಸಮಾಧಿಯಾಗಿದ್ದ ಯೋಜನೆ ಮತ್ತೆ ಎದ್ದು ಬಂದದ್ದು ಸರ್. ಎಂ.ವಿ. ಅವರ ಸಾತ್ವಿಕ ಹಟದಿಂದ.

ಇಲ್ಲೊಂದು ಚಾರಿತ್ರಿಕ ಅಂಶವನ್ನು ಗಮನಿಸಬಹುದು. 1892ರಲ್ಲಿ ಮಾಡಿಕೊಂಡ ಒಪ್ಪಂದದ ಪ್ರಕಾರ ಮೈಸೂರು ರಾಜ್ಯ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮೊದಲು ಆಗಿನ ಮದ್ರಾಸ್ ಸರ್ಕಾರದ ಅನುಮತಿ ಪಡೆಯಬೇಕಾಗಿತ್ತು. ಈ ಕಾರಣಕ್ಕಾಗಿ ಕನ್ನಂಬಾಡಿ ಕಟ್ಟೆ ಯೋಜನೆಗೆ ಅದು ಪ್ರತಿರೋಧ ತೋರಿತು. 1913ರಲ್ಲಿ ನ್ಯಾಯ ಪಂಚಾಯತಿಯ ಮುಂದೆ ವಿಶ್ವೇಶ್ವರಯ್ಯನವರು ವಾದ ಮಂಡಿಸಿ ಕರ್ನಾಟಕ ಬಳಸಿಕೊಳ್ಳುತ್ತಿರುವುದು ಕೇವಲ ಹರಿವಿನ ಶೇ. 8 ಭಾಗ ಮಾತ್ರ ಎಂದು ಪ್ರತಿಪಾದಿಸಿ ಕೊನೆಗೂ ಕನ್ನಂಬಾಡಿ ಕಟ್ಟೆ ಕಟ್ಟಲು ಇದ್ದ ತಕರಾರನ್ನು ಬಹು ಸೂಕ್ಷ್ಮವಾಗಿ ನಿಭಾಯಿಸಿ ಗೆದ್ದರು. ಬಹುಶಃ ಅವರು ಸಮರ್ಥವಾಗಿ ವಾದ ಮಂಡಿಸದಿದ್ದರೆ ಕನ್ನಂಬಾಡಿ ಕಟ್ಟೆ ಬರೀ ಕನಸಿನ ಯೋಜನೆಯಾಗುತ್ತಿತ್ತು.

ಮಹಾರಾಷ್ಟ್ರದ ಕಡಕವಾಸ್ಲ ಜಲಾಶಯಕ್ಕೆ ನಿರ್ಮಿಸಿದ ತೂಬಿನಂತೆಯೇ ಇಲ್ಲಿ ಕನ್ನಂಬಾಡಿ ಕಟ್ಟೆಗೂ ಅದನ್ನು ಅಳವಡಿಸಿದವರು ವಿಶ್ವೇಶ್ವರಯ್ಯನವರೇ. ಅವೂ ಕೂಡ ಸ್ವದೇಶಿ ನಿರ್ಮಿತ. ಈ ವಿಚಾರಕ್ಕೆ ಸಿಕ್ಕಬೇಕಾದಷ್ಟು ಪ್ರಚಾರವೇ ಸಿಕ್ಕಿಲ್ಲ. ಹಾಗೆಯೇ ಸುರ್ಕಿ ಗಾರೆ ಬಳಸಿ ಹಲವು ಲಕ್ಷ ರೂಪಾಯಿಯನ್ನು ಉಳಿತಾಯ ಮಾಡಿದ್ದೂ ಉಂಟು. ಏಕೆಂದರೆ ಆಗ ಸಿಮೆಂಟು ಉತ್ಪಾದನೆ ಇದ್ದರೂ ದುಬಾರಿಯಾಗಿತ್ತು. ಈ ವಿಚಾರದಲ್ಲಿ ಅನೇಕ ಮಂದಿ ಇನ್ನೊಂದು ವಿಚಾರದತ್ತ ಬೊಟ್ಟು ಮಾಡುತ್ತಾರೆ. ಸುರ್ಕಿ ಗಾರೆ ಬಳಸುವುದು ಆಗಿನ ಕಾಲಕ್ಕೆ ವಿಶೇಷವೇನೂ ಆಗಿರಲಿಲ್ಲ. ಅದು ವಿಶ್ವೇಶ್ವರಯ್ಯನವರ ಹೊಸ ಪ್ಲಾನೇನೂ ಅಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿ ವಾಣಿವಿಲಾಸ ಸನ್ನಿಧಿ–ಕೆಂಪನಂಜಮ್ಮಣ್ಣಿಯವರು ಮೈಸೂರಿನ ಆಡಳಿತ ವಹಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾವತಿ ನದಿಗೆ ಅಡ್ಡಲಾಗಿ ವಾಣಿವಿಲಾಸ ಸಾಗರವನ್ನು ನಿರ್ಮಿಸಿದರು. ಅದು ಕೂಡ ಸಂಪೂರ್ಣವಾಗಿ ಸುರ್ಕಿ ಗಾರೆಯಿಂದಲೇ ಆದದ್ದು.

ಕೆ.ಆರ್.ಎಸ್. ಅಣೆಕಟ್ಟು ಮುಗಿಯುವ ಹೊತ್ತಿಗೆ ವಿಶ್ವೇಶ್ವರಯ್ಯನವರು ಮುಖ್ಯ ಎಂಜಿನಿಯರಾಗಲಿ ಅಥವಾ ದಿವಾನರಾಗಲಿ ಆಗಿರಲಿಲ್ಲ. 1911ರಲ್ಲಿ ಪ್ರಾರಂಭವಾದ ಈ ಯೋಜನೆ 1932ರಲ್ಲಿ ಕೊನೆಗೊಂಡಿತು. ತಗಲಿದ ವೆಚ್ಚ ಅಂದಾಜು 2.5 ಕೋಟಿ ರೂಪಾಯಿ.

## ಒಡವೆ ಮಾರಿದ್ದು ನಿಜವೇ?

ಕೃಷ್ಣರಾಜ ಅಣೆಕಟ್ಟು ಯೋಜನೆಗೆ ಮಹಾರಾಜರಿಂದ ಅನುಮೋದನೆ ದೊರೆಯಿತು. ಆದರೆ ಇದಕ್ಕೆ ಹೇಗೆ ಬಂಡವಾಳ ಒದಗಿಸಿದರೆಂಬುದರ ವಿವರ ಹೆಚ್ಚೇನೂ ಲಭ್ಯವಿಲ್ಲ. ಇದೇ ಸಂದರ್ಭದಲ್ಲಿ ಕರ್ನಾಟಕದ ಆರ್ಥಿಕ ಸ್ಥಿತಿಯ ಪುನರಾವಲೋಕನವೂ ಮುಖ್ಯವಾಗುತ್ತದೆ. ಟಾಟಾ ವಿಜ್ಞಾನ ಸಂಸ್ಥೆಗೆ ಬೆಂಗಳೂರಿನಲ್ಲಿ 375 ಎಕರೆ ಭೂಮಿಯನ್ನೂ 50,000 ರೂಪಾಯಿ ವಾರ್ಷಿಕ ಅನುದಾನವನ್ನು ಕೊಟ್ಟು ಮಹಾರಾಜರು ಪ್ರೋತ್ಸಾಹಿಸಿದರು. ಮೈಸೂರು ಬ್ಯಾಂಕಿಗೆ ಮೂಲ ಬಂಡವಾಳವಾಗಿ 20 ಲಕ್ಷ ರೂಪಾಯಿ ಹೂಡಿದ್ದರು. ಗಂಧದೆಣ್ಣೆ ಕಾರ್ಖಾನೆ, ಭದ್ರಾವತಿ ಕಾರ್ಖಾನೆ, ಕಾಗದದ ಕಾರ್ಖಾನೆ ಇವು ಒಂದೊಂದೂ ಹಲವು ಲಕ್ಷ ರೂಪಾಯಿ ಹೂಡಿಕೆಯನ್ನು ಕಂಡಿದ್ದವು. 1927ರಲ್ಲಿ ಕೃಷ್ಣರಾಜಸಾಗರಕ್ಕೆ ನಿರ್ಮಿಸಿದ ಇರ್ವಿನ್ ನಾಲೆಗಾಗಿ (1,20,000 ಎಕರೆಗೆ ನೀರಾವರಿ) 222 ಲಕ್ಷ ರೂಪಾಯಿ ಖರ್ಚು ಭರಿಸಬೇಕಾಯಿತು. ಆಗ ಕಂಪನಿ ಸರ್ಕಾರಕ್ಕೆ ಮೈಸೂರು ಸಂಸ್ಥಾನದಿಂದ ವಾರ್ಷಿಕ 35 ಲಕ್ಷ ರೂಪಾಯಿ ಪೊಗದಿ ಹೋಗುತ್ತಿತ್ತು. ರಾಜ್ಯ ಭಂಡಾರ ಬರಿದಾಗಿದ್ದರೆ ಇದು ಹೇಗೆ ಸಾಧ್ಯವಾಗುತ್ತಿತ್ತು?

ಭಾರತದ ಗವರ್ನರ್ ಜನರಲ್ ಲಾರ್ಡ್ ಇರ್ವಿನ್ ಈ ಪೊಗದಿಯ ಮೊತ್ತದಲ್ಲಿ 10.50 ಲಕ್ಷ ರೂಪಾಯಿಗಳನ್ನು ಕಡಿತಗೊಳಿಸಲು ಶಿಫಾರಸು ಮಾಡಿದ್ದ. ಬ್ರಿಟಿಷ್ ಸರ್ಕಾರವೂ ಇದಕ್ಕೆ ಒಪ್ಪಿತ್ತು. ಅದರ ಕೃತಜ್ಞತೆಯ ಸಲುವಾಗಿಯೇ ಇರ್ವಿನ್ ಹೆಸರನ್ನು ನಾಲೆಗೆ ಇಡಲಾಯಿತು. ಮುಂದೆ ಇದು 'ವಿಶ್ವೇಶ್ವರಯ್ಯ ನಾಲೆ' ಎಂದಾಯಿತು.

ಇತ್ತ ಕೃಷ್ಣರಾಜಸಾಗರ ಅಣೆಕಟ್ಟಿನ ನಿರ್ಮಾಣ ಕಾರ್ಯ ಮುಂದುವರಿಯುತ್ತಿರುವಾಗಲೇ ಬ್ರಿಟನ್ನಿನ ಯುವರಾಜ 8ನೇ ಎಡ್ವರ್ಡ್ (ಪ್ರಿನ್ಸ್ ಆಫ್ ವೇಲ್ಸ್) ಮೈಸೂರು ಸಂಸ್ಥಾನಕ್ಕೆ 1922ರಲ್ಲಿ ಭೇಟಿ ನೀಡಿದಾಗ, ಮೈಸೂರು ಸಂಸ್ಥಾನ ಬ್ರಿಟಿಷರಿಗೆ ಯುದ್ಧಕ್ಕೆ ನೆರವಾಗಲೆಂದು 50 ಲಕ್ಷ ರೂಪಾಯಿ ದೇಣಿಗೆ ನೀಡಿತ್ತು. ಇದನ್ನು ಕೂಡ ಆತ ಪ್ರಸ್ತಾಪಿಸಿದ್ದರು. ಅಷ್ಟೇ ಅಲ್ಲ, ಯುದ್ಧ ಬಾಂಡ್ ರೂಪದಲ್ಲಿ ಮೈಸೂರು ಜನತೆ 113 ಲಕ್ಷ ರೂಪಾಯಿ ಹೂಡಿದ್ದನ್ನೂ ಯುವರಾಜ ಸ್ಮರಿಸಿಕೊಂಡಿದ್ದಾರೆ. ಭಾರತದ ವೈಸ್‌ರಾಯ್ ಹಾಗೂ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಚಾರ್ಲ್ಸ್‌ವುಡ್ 1919ರಲ್ಲಿ ಬೆಂಗಳೂರಿಗೆ ಭೇಟಿ ನೀಡಿದಾಗ ಏಳನೇ ಎಡ್ವರ್ಡ್‌ನ ಅಮೃತ ಶಿಲಾವಿಗ್ರಹವನ್ನು ಅನಾವರಣ ಮಾಡಿದ್ದರು. ಇದರ ನಿರ್ಮಾಣಕ್ಕೆ ಸಾರ್ವಜನಿಕರೇ ಧಾರಾಳವಾಗಿ ದೇಣಿಗೆ ನೀಡಿದ್ದರು. ಇವು

### ನಾಲ್ಕು ಮೂಟೆ ವಜ್ರ ವೈಢೂರ್ಯ ಮಾರಾಟ

ಅಂದ್ದಾಗೆ ಗೊತ್ತ ನಿಮಗೆ – ನನಗೆ ಇನ್ನೊಂದು ಹೆಸರಿದೆ. ಅದು ಕೃಷ್ಣರಾಜ ಸಾಗರ – ಅಂತ. ಇದೇನಪ್ಪಾ ಎರಡೆರಡು ಹೆಸರು, ಒಂದೇ ಸಾಕಲ್ವಾ ಅಂತ ನಗಬೇಡಿ. ಕನ್ನಂಬಾಡಿ ಕಟ್ಟೆ ಅನ್ನೋದು ಸ್ಥಳದಾನ ಮಾಡಿದ ಹಳ್ಳಿಯನ್ನು ಸ್ಮರಿಸಿಕೊಳ್ಳುವಂತೇನೇ, ಕೃಷ್ಣರಾಜ ಸಾಗರ ಅನ್ನೋದು ನನ್ನ ಹುಟ್ಟಿಗೆ ಕಾರಣವಾದ ಆ ನಮ್ಮಪ್ಪ ಮಹಾರಾಜರನ್ನ ನೆನಪಿಸಿಕೊಳ್ಳೋದಿಕ್ಕೆ. ನನ್ನನ್ನು ಕಟ್ಟಲು ಹಣದ ಕೊರತೆ ಇದ್ದಾಗ ತನ್ನ ಬಳಿ ಇದ್ದ ನಾಲ್ಕು ಮೂಟೆ ವಜ್ರ, ವೈಢೂರ್ಯಗಳನ್ನು ಮಾರಾಟ ಮಾಡಿ, ಆ ಹಣವನ್ನ ನನ್ನ ಅಡಿಪಾಯದಲ್ಲಿ ಸುರಿದಿದ್ದ ಆ ಪುಣ್ಯಾತ್ಮನ್ನ ನೆನಪಿಸಿಕೊಳ್ಳೋದಕ್ಕೆ. ಮೂಟೆ ಅಂದರೆ ಸಣ್ಣ ಪುಟ್ಟ ಮೂಟೆ ಅಲ್ಲ, ಪಲ್ಲಾ ಮೂಟೆ ಚೀಲದಲ್ಲಿ. ನಂಬೋದು ಕಷ್ಟ ಅಂತೀರಾ? ಹೌದು, ನಂಬೋದು ಕಷ್ಟಾನೇ, ಆದರೂ ಇದು ನಿಜ. ಪುರಾಣವಲ್ಲ. ಪುರಾಣವೇನೋ ಅನಿಸುವ ಸತ್ಯ ಸಂಗತಿ.

(ನಾನು ಕನ್ನಂಬಾಡಿ ಕಟ್ಟೆ, ಪ್ರೊ. ಪಿ.ವಿ. ನಂಜರಾಜ ಅರಸು, 2017, ಪು: 2).